ಮಾರುಕಟ್ಟೆ ತಜ್ಞರು, 'ಹಿಂದೆ ಕಂಪ್ಯೂಟರ್ ಕಾಲಿಟ್ಟಾಗ ಎಲ್ಲವೂ ಮುಗಿದೇ ಹೋಗುತ್ತದೆ ಎಂದವರಿದ್ದರು. ಆಮೇಲೇನಾಯಿತು ಎಂಬುದನ್ನು ನೋಡಿದ್ದೇವೆ. ಹಳೆಯ ಕೆಲಸಗಳು ಹೋಗಿ ಹೊಸ ಕೆಲಸಗಳು ಸೃಷ್ಟಿಯಾಗಲಿಲ್ಲವೆ? ಹೊಸ ಯಂತ್ರಗಳು ಕಾಲಿಟ್ಟಂತೆ ಅವುಗಳನ್ನು ನಿರ್ವಹಿಸಲು ಜನ ಬೇಕಾದರು. ಅವುಗಳ ತಯಾರಿಕೆಗೆ ಕೆಲಸಗಾರರು ಬೇಕಾದರು. ಬಂಡವಾಳ ಹೂಡುವವರು ಬೇಕಾದರು. ಹೀಗೆ ಹೊಸ ತಲೆಮಾರಿನ ಕೆಲಸಗಾರರು, ಕುಶಲ ಕರ್ಮಿಗಳು ಸೃಷ್ಟಿಯಾದರು. ನೋಡ ನೋಡುತ್ತಿದ್ದಂತೆ ಜಗತ್ತು ಕಂಪ್ಯೂಟರ್‌ಮಯವಾಯಿತು. ಹಿಂದೆಂದೂ ಕಂಡರಿಯದಷ್ಟು ಆರ್ಥಿಕ ಸಂಪತ್ತು ವೃದ್ಧಿಯಾಯಿತು. ಇದಿನ್ನೂ ಆರಂಭ, ಅಪಾಯದ ಜೊತೆ ಅವಕಾಶಗಳೂ ಬರುತ್ತವೆ. ಹೊಸ ಯಂತ್ರ ಮನ್ವಂತರಕ್ಕೆ ನಾಂದಿ ಹಾಡಲಿರುವ 'ಯಾಂಬು' ಸಮಾಜದ ಎಲ್ಲ ಕ್ಷೇತ್ರಗಳ ಮೇಲೂ ತನ್ನ ಪ್ರಭಾವ ಬೀರಲಿದೆ' ಎಂದು ಹೇಳುವವರೂ ಇದ್ದಾರೆ. ಹಳೆಯ ಕೆಲಸಗಳು ಹೋಗಿ ಅದರ ಜಾಗದಲ್ಲಿ ತಂತ್ರಜ್ಞಾನ ಆಧಾರಿತ ಹೊಸ ಕೆಲಸಗಳು ಹುಟ್ಟುತ್ತವೆ. ಅಲ್ಲಿಯವರೆಗೂ ತಾಳ್ಮೆ ವಹಿಸಬೇಕಷ್ಟೇ ಎನ್ನುತ್ತಾರೆ.

## ದೊಡ್ಡ ಖರ್ಚಿನ ಬಾಬತ್ತು

ನಾವೀಗ ಬಳಸುತ್ತಿರುವ ಚಾಟ್ ಜಿಪಿಟಿ ನಿರ್ಮಾಣ ಮತ್ತು ತರಬೇತಿಗೆ ತಗಲುವ ಖರ್ಚು ಕಡಿಮೆಯೇನಿಲ್ಲ. ಇದನ್ನು ನಿರ್ಮಿಸಲು 175 ಶತಕೋಟಿ ನಿಯತಾಂಕ–ಮಾನದಂಡ (Parameter) ಬಳಸಲಾಗಿದೆ. ಚಾಟ್ ಜಿಪಿಟಿ–3ಕ್ಕೆ ತರಬೇತಿ ನೀಡಲು 1.3 ಗಿಗಾವಾಟ್‌ನಷ್ಟು ವಿದ್ಯುತ್ತು ವ್ಯಯವಾಗಿತ್ತು. ಇದು ನಮ್ಮ ಹಳ್ಳಿಯೊಂದರ ಮೂರು ಸಾವಿರ ಮನೆಗಳಿಗೆ ವರ್ಷ ಪೂರ್ತಿ ನೀಡುವ ವಿದ್ಯುತ್ತಿಗೆ ಸಮ. ತಗುಲಿದ ಖರ್ಚು 46 ದಶಲಕ್ಷ ಡಾಲರ್‌ಗಳು. ಈಗ ಬಂದಿರುವ ಚಾಟ್ ಜಿಪಿಟಿಯ 4ನೇ ಆವೃತ್ತಿಗೆ ತಗುಲಿರುವ ಖರ್ಚು ಬರೋಬ್ಬರಿ 820 ಕೋಟಿ ರೂಪಾಯಿಗಳು.

ಇಂಟರ್‌ನೆಟ್‌ನಲ್ಲಿ ಲಭ್ಯವಿರುವ ಎಲ್ಲ ಬರಹರೂಪದ ಮಾಹಿತಿಯನ್ನು ಬಳಸಿಕೊಂಡು ಗ್ರಾಹಕರಿಗೆ ಬೇಕಾದ ಫಲಿತಾಂಶ ಒದಗಿಸುತ್ತದೆ. ವೇಗವಾಗಿ ಫಲಿತಾಂಶ ಸಿಗಬೇಕಾದರೆ ಅದಕ್ಕೆ ಫೀಡ್ ಮಾಡುವ ದತ್ತಾಂಶ ತುಂಬಾ ದೊಡ್ಡದಿರಬೇಕು. ಕಳೆದ ನವೆಂಬರ್‌ನ ಲೆಕ್ಕಾಚಾರದ ಪ್ರಕಾರ ಈಗ ಇಂಟರ್‌ನೆಟ್‌ನಲ್ಲಿ ಲಭ್ಯವಿರುವ ದತ್ತಾಂಶ 2026ಕ್ಕೂ ಮುನ್ನ ಸಂಪೂರ್ಣವಾಗಿ ಚಾಟ್ ಜಿಪಿಟಿಯ ಬಳಕೆಗೆ ಸಿಗುತ್ತದೆ. ಅದರ ನಂತರ ಯಾವುದೇ ಮಾಹಿತಿ ಸಿಗದಿದ್ದರೆ, ಚಾಟ್ ಜಿಪಿಟಿ ಕೆಲಸವಿಲ್ಲದೆ ಮೂಲೆ ಸೇರುತ್ತದೆ, ಇಲ್ಲವೇ ಮಾಡಿದ್ದನ್ನೇ ಮಾಡುತ್ತ, ಹೇಳಿದ್ದನ್ನೇ ಹೇಳುತ್ತ ಹಳೆಯ ಜಾಡಿಗೆ ಸರಿಯುತ್ತದೆ. ಈಗ ಚಾಟ್ ಜಿಪಿಟಿ–4 ಬಳಸುತ್ತಿರುವ ದತ್ತಾಂಶ 2021ನೇ ವರ್ಷದ್ದು. ಅಂದರೆ ಎರಡು ವರ್ಷ ಹಳೆಯ ಮಾಹಿತಿ ಬಳಸಿ ಅದು ಕೆಲಸ ಮಾಡುತ್ತಿದೆ.





ಹೀಗೆಯೇ ಮುಂದುವರೆದರೆ ಚಾಟ್ ಜಿಪಿಟಿಯ ಕಥೆ ಮುಗಿದಂತೆಯೇ! ಉಗಮದಷ್ಟೇ ಬೇಗ ಅದರ ಅಂತ್ಯವೂ ಮುಗಿಯುತ್ತದೆ. ಇದನ್ನೊಪ್ಪದ ತಜ್ಞರು 'ಹಾಗಾಗುವುದಿಲ್ಲ. ಖಾಸಗಿಯವರ, ಕಾರ್ಪೊರೇಟ್‌ಗಳ ಬಳಿಯೂ ಸಾಕಷ್ಟು ದತ್ತಾಂಶ ಶೇಖರಗೊಂಡಿದೆ. ಅದನ್ನೂ ಪಡೆದುಕೊಂಡು ಚಾಟ್ ಜಿಪಿಟಿಯ ಕೆಲಸ ಮುಂದುವರೆಯುವಂತೆ ಮಾಡಬಹುದು' ಎನ್ನುತ್ತಾರೆ. ಇಲ್ಲೊಂದು ಸಮಸ್ಯೆಯೂ ಇದೆ. ಅಗಾಧ ಪ್ರಮಾಣದ ದತ್ತಾಂಶದ ಸರಿಯಾದ ಬಳಕೆಗೆ ಬೇಕಾದ ಕಂಪ್ಯೂಟರ್ ಹಾರ್ಡ್‌ವೇರ್ ಇಲ್ಲದಿರುವುದು ಯಾಂತ್ರಿಕ ಬುದ್ಧಿಮತ್ತೆಯ ಕೆಲಸಕ್ಕೆ ತುಸು ಹಿನ್ನಡೆ ಉಂಟುಮಾಡುತ್ತಿದೆ ಎನ್ನುವುದು ತಜ್ಞರ ಅಳಲು. 2010ರಲ್ಲಿ CPU ಬದಲಿಗೆ ಬಂದ GPU ಬಹಳ ದೊಡ್ಡ ಅನುಕೂಲ ಕಲ್ಪಿಸಿತ್ತು. ಬರುಬರುತ್ತಾ ಕಂಪ್ಯೂಟರ್ ಬಲಶಾಲಿಯಾಗಬೇಕೆಂದರೆ ಅದಕ್ಕೆ ತಕ್ಕ ಸ್ಟೋರೇಜ್ ಮತ್ತು ಪ್ರೊಸೆಸಿಂಗ್ ಘಟಕಗಳು ಬೇಕಾಗುತ್ತವೆ. ಮಾಹಿತಿ–ದತ್ತಾಂಶದ ಕಣಜ ಹಿರಿದಾದಷ್ಟೂ ಚಾಟ್ ಜಿಪಿಟಿಗಳ ತರಬೇತಿಗೆ ಭಾರೀ ಬಂಡವಾಳ ಬೇಕಾಗುತ್ತದೆ. ಓಪನ್ ಎಐ ಕಂಪನಿಯ ಸಾಂಟ್ ಆಲ್ಟ್‌ಮನ್ ಕೂಡಾ ಅಂಥದೊಂದು ಬೃಹತ್ ದತ್ತಾಂಶ ಸಂಸ್ಕರಣಾ ಘಟಕದ ಹುಡುಕಾಟದಲ್ಲಿದ್ದಾರೆ. 'ನಾವೀಗ ಯುಗ ಸಮಾಪ್ತಿಯೊಂದಕ್ಕೆ ಸಾಕ್ಷಿಯಾಗುತ್ತಿದ್ದೇವೆ. ಇನ್ನು ಮುಂದೆ ಬರುವುದೆಲ್ಲ ಬೃಹತ್ ಆಗಿರಲಿದೆ, ಆದರೆ ಅವುಗಳನ್ನು ಉತ್ತಮ ಪಡಿಸುವ ಜವಾಬ್ದಾರಿ ನಮಗಿದೆ' ಎಂದಿದ್ದಾರೆ ಆಲ್ಟ್‌ಮನ್.

## ನ್ಯಾಯ ಪಂಚಾಯ್ತಿಗೂ ಯಾಂಬು!

ನ್ಯಾಯಾಲಯಗಳೂ ಕೆಲವು ಪ್ರಕರಣಗಳನ್ನು ಬಗೆಹರಿಸಲು ಚಾಟ್ ಜಿಪಿಟಿ ಮೊರೆಹೋಗಿವೆ. ಕೊಲಂಬಿಯಾ, ಪಾಕಿಸ್ತಾನಗಳು ವ್ಯಾಜ್ಯವೊಂದರ ವಿಚಾರಣೆಯ ತೀರ್ಪು ನೀಡಲು ಯಾಂತ್ರಿಕ ಬುದ್ಧಿಮತ್ತೆಯನ್ನು ಬಳಸಿದರೆ, ನಮ್ಮದೇ ನ್ಯಾಯಾಲಯವೊಂದು ಕೊಲೆ ಪ್ರಕರಣದ ಆರೋಪಿಗೆ ಜಾಮೀನು ನೀಡಬೇಕೇ ಬೇಡವೆ ಎಂದು ಚಾಟ್ ಜಿಪಿಟಿಯನ್ನು ಕೇಳಿದ ಪ್ರಕರಣದ ಬಗ್ಗೆ ಲೇಖನದ ಆರಂಭದಲ್ಲೇ ಉಲ್ಲೇಖವಿದೆ.

ಕೊಲಂಬಿಯಾದಲ್ಲಿ ಆಟಿಸಂನಿಂದ ಬಳಲುತ್ತಿದ್ದ ಬಾಲಕನ ಚಿಕಿತ್ಸೆಗೆ ಇನ್‌ಶ್ಯುರೆನ್ಸ್ (ವಿಮೆ) ನೀಡಲು ಕಂಪನಿಯೊಂದು ನಿರಾಕರಿಸಿತ್ತು. ಬಾಲಕನ ತಂದೆ ಕಂಪನಿಯ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿದ್ದರು. ಎರಡೂ ಕಡೆ ವಾದ ಆಲಿಸಿದ ನ್ಯಾಯಾಧೀಶರು ಏನು ಮಾಡುವುದೆಂದು ತೋಚದೆ ಚಾಟ್ ಜಿಪಿಟಿಯ ಮೊರೆಹೋದರು. ಕೊನೆಗೆ ಬಾಲಕನ ಪರವಾಗಿ ತೀರ್ಪು ನೀಡಿ ಚಿಕಿತ್ಸೆಯ ವೆಚ್ಚವನ್ನು ಕಂಪನಿಯೇ ಸಂಪೂರ್ಣವಾಗಿ ಭರಿಸಬೇಕೆಂದು ಹೇಳಿದ ನ್ಯಾಯಾಧೀಶರು, ಬಾಲಕನ ತಂದೆಯ ಕಣ್ಣೀರು ಒರೆಸುವಲ್ಲಿ